ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಮಸಾಸಂಇ : ಉ ನಿ : ಸುಮಪ : 2019–20 : ದಿನಾಂಕ: 27–11–2019

## ಪತ್ರಿಕಾ ಆಮಂತ್ರಣ

1. ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಮತ್ತು ಆಲ್‌ಬೋರ್ಗ್ ಸ್ಮಾರ್ಟ್ ಸಿಟಿ ಡೆನ್ಮಾರ್ಕ್ ಸಹಯೋಗದಲ್ಲಿ ಸೋದರಿ ನಗರ ಒಡಂಬಡಿಕೆಗೆ ಚಾಲನೆ:

ಘನ ಉಪಸ್ಥಿತಿ:

ಶ್ರೀ ಜೆ. ಸಿ. ಮಾಧುಸ್ವಾಮಿ,
ತುಮಕೂರು ಜಿಲ್ಲಾ ಉಸ್ತುವಾರಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.

ಶ್ರೀ ಫ್ರೆಡ್ಡಿ ಸ್ವಾನೆ
ಘನತೆವೆತ್ತ ಡೆನ್ಮಾರ್ಕ್ ದೇಶದ ರಾಯಭಾರಿ.

ದಿನಾಂಕ: 28–11–2019. ಗುರುವಾರ ಸಮಯ: ಮಧ್ಯಾಹ್ನ 12.30 ಗಂಟೆಗೆ

ಸ್ಥಳ: ಕೊಠಡಿ ನಂ 313, ವಿಧಾನಸೌಧ, ಬೆಂಗಳೂರು.

2. ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆ ಸಮಿತಿ ಬೆಂಗಳೂರು ವತಿಯಿಂದ ಹುಳಿಮಾವು ಕೆರೆ ಪ್ರದೇಶದ ಹಾನಿ ಕುರಿತು ಸಭೆ ನಂತರ ಸ್ಥಳ ಪರಿವೀಕ್ಷಣೆ

ದಿನಾಂಕ : 28–11–2019 ಗುರುವಾರ ಮಧ್ಯಾಹ್ನ 2–00 ಗಂಟೆಗೆ
ಸ್ಥಳ : ಸಮ್ಮೇಳನ ಸಭಾಂಗಣ, ಮೊದಲನೇ ಮಹಡಿ, ಶಾಸಕರ ಭವನ ನೂತನ ಕಟ್ಟಡ – 5 ಬೆಂಗಳೂರು ಇಲ್ಲಿ ಸಭೆ ಸೇರಿ ನಂತರ ಹುಳಿಮಾವು ಕೆರೆ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸಲಿದೆ.

## ಪತ್ರಿಕಾ ಪ್ರಕಟಣೆ

## ವಿಧಾನಸಭಾ ಉಪಚುನಾವಣೆ
## ಕಾರ್ಮಿಕರಿಗೆ ಕಡ್ಡಾಯ ವೇತನ ಸಹಿತ ರಜೆ ನೀಡಲು ಆದೇಶ

ಬೆಂಗಳೂರು, ನವೆಂಬರ್ 27 (ಕರ್ನಾಟಕ ವಾರ್ತೆ)

ಭಾರತ ಚುನಾವಣಾ ಆಯೋಗವು ಕರ್ನಾಟಕ ವಿಧಾನಸಭೆ 15 ಕ್ಷೇತ್ರಗಳಾದ 03 – ಅಥಣಿ, 04 – ಕಾಗವಾಡ, 09 – ಗೋಕಾಕ್, 81 – ಯೆಲ್ಲಾಪುರ, 86 – ಹಿರೇಕೆರೂರು, 87– ರಾಣೆಬೆನ್ನೂರು 90– ವಿಜಯನಗರ, 141 – ಚಿಕ್ಕಬಳ್ಳಾಪುರ, 151 – ಕೆ.ಆರ್. ಪುರ, 153 – ಯಶವಂತಪುರ, 156 – ಮಹಾಲಕ್ಷ್ಮೀ ಬಡಾವಣೆ, 162 – ಶಿವಾಜಿನಗರ, 178 – ಹೊಸಕೋಟೆ, 192 – ಕೃಷ್ಣರಾಜಪೇಟೆ, 212 – ಹುಣಸೂರು, ಈ ವಿಧಾನಸಭೆ ಕ್ಷೇತ್ರಗಳಿಗೆ ದಿನಾಂಕ 5–12–2019 ರಂದು ಉಪ ಚುನಾವಣೆ – 2019 ನ್ನು ಘೋಷಿಸಿದ್ದು, ಮತದಾನ ನಡೆಯಲಿರುವ ಕ್ಷೇತ್ರಗಳ ವ್ಯಾಪ್ತಿಯಲ್ಲಿ ನೋಂದಾಯಿತರಾದ ಅರ್ಹ ಮತದಾರರಾಗಿರುವ ಎಲ್ಲಾ ಕಾರ್ಮಿಕರಿಗೆ ಮತ ಚಲಾಯಿಸಲು ಅನುಕೂಲವಾಗುವಂತೆ ಎಲ್ಲಾ ಅಂಗಡಿಗಳು, ವಾಣಿಜ್ಯ ಸಂಸ್ಥೆಗಳು, ಕಾರ್ಖಾನೆಗಳು ಹಾಗೂ ಇತರೆ ಸಂಸ್ಥೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ 1963 ರ ಕರ್ನಾಟಕ ಔದ್ಯೋಗಿಕ ಸಂಸ್ಥೆಗಳ (ರಾಷ್ಟ್ರೀಯ ಹಾಗೂ ಹಬ್ಬದ ರಜಾ ದಿನಗಳು ) ಕಾಯ್ದೆಯ ಕಲಂ 3–ಎ ಹಾಗೂ 1951 ರ ಪ್ರಜಾ ಪ್ರತಿನಿಧಿ ಕಾಯ್ದೆಯ ಕಲಂ 135 (ಬಿ) ರಡಿಯಲ್ಲಿ ವೇತನ ಸಹಿತ ರಜೆ ಘೋಷಿಸಿ ಸಂವಿಧಾನಾತ್ಮಕ ಹಕ್ಕಾದ ಮತವನ್ನು ಚಲಾಯಿಸುವುದಕ್ಕಾಗಿ ಎಲ್ಲಾ ಸಂಸ್ಥೆಗಳು / ನಿಯೋಜಕರು ಅನುವು ಮಾಡಿ ಕೊಡಬೇಕಾಗಿರುತ್ತದೆ.

ಆದ್ದರಿಂದ ಚುನಾವಣೆಯ ನಡೆಯುವ ಕ್ಷೇತ್ರಗಳಲ್ಲಿ ಮತ ಚಲಾಯಿಸುವ ಅರ್ಹ ಕಾರ್ಮಿಕರು ಮತ ಚಲಾಯಿಸಲು ಅನುಕೂಲವಾಗುವಂತೆ ಎಲ್ಲಾ ಕಾರ್ಖಾನೆಗಳು, ಅಂಗಡಿಗಳು, ವಾಣಿಜ್ಯ ಸಂಸ್ಥೆಗಳು ಮತ್ತು ಇತರೆ ಸಂಸ್ಥೆಗಳ ಮಾಲೀಕರು ವೇತನ ಸಹಿತ ರಜೆ ನೀಡುವಂತೆ ಈ ಮೂಲಕ ಆದೇಶಿಸಿದೆ. ತಪ್ಪಿದಲ್ಲಿ ಸಂಬಂಧಪಟ್ಟ ಸಂಸ್ಥೆ / ನಿಯೋಜಕರ ವಿರುದ್ಧ ನಿಯಮಾನುಸಾರ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಕಾರ್ಮಿಕ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪರಿಶಿಷ್ಟ ಜಾತಿಗೆ ಸೇರಿದ ಕಲಾವಿದರಿಂದ ಕಲಾಶಿಬಿರ/ಕಾರ್ಯಾಗಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 27 (ಕರ್ನಾಟಕ ವಾರ್ತೆ)

ಕರ್ನಾಟಕ ಲಲಿತಕಲಾ ಅಕಾಡೆಮಿಯು ಪರಿಶಿಷ್ಟ ಜಾತಿಗೆ ಸೇರಿದ ಕಲಾವಿದರನ್ನು ಉತ್ತೇಜಿಸುವ ದೃಷ್ಟಿಯಿಂದ 2019–20 ನೇ ಸಾಲಿನಲ್ಲಿ ಕಲಾಶಿಬಿರ/ಕಾರ್ಯಾಗಾರವನ್ನು ನೀಡಲು ನಿರ್ಧರಿಸಿದೆ. ಚಿತ್ರಕಲಾ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಬಿ.ಬಿ.ಎ/ಬಿ.ಎಫ್.ಎ/ಎಂ.ಎಫ್.ಎ/ಎಂ.ವಿ.ಎ. ಇತರೆ ಯಾವುದೇ ಚಿತ್ರಕಲಾ ಶಿಕ್ಷಣಕ್ಕೆ ಸಂಬಂಧಪಟ್ಟ ವಿದ್ಯಾರ್ಹತೆ ಹೊಂದಿರಬೇಕು. ವಿದ್ಯಾರ್ಥಿಗಳು/ಯುವಚಿತ್ರಕಲಾವಿದರು ಕರ್ನಾಟಕದವರಾಗಿದ್ದು, ವಯೋಮಿತಿ 18 ರಿಂದ 35 ವರ್ಷ ಒಳಗಿರಬೇಕು.

ಆಸಕ್ತಿಯುಳ್ಳ ಕಲಾವಿದರು ತಮ್ಮ ಪೂರ್ಣ ವಿವರಗಳೊಂದಿಗೆ ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ ಹಾಗೂ "6*8" ಅಳತೆಯ ಮೂರು ಚಿತ್ರಕಲಾಕೃತಿಗಳ ಛಾಯಾಚಿತ್ರಗಳು ಸೇರಿದಂತೆ ಸ್ವ-ವಿವರವುಳ್ಳ (ಬಯೋಡೇಟಾ) ವನ್ನು ದಿನಾಂಕ: 26-12-2019 ರ ಒಳಗಾಗಿ ಅರ್ಜಿಯನ್ನು ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು – 560 002, ಇವರಿಗೆ ತಲುಪಿಸಲು ಕೋರಿದೆ.

ತಡವಾಗಿ ಬಂದ ಹಾಗೂ ಅಪೂರ್ಣ ಅರ್ಜಿಯನ್ನು ಪರಗಣಿಸಲಾಗುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ ಅಕಾಡೆಮಿಯ ವೆಬ್‌ಸೈಟ್ www.lalitkalakarnataka.org. ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಕಟಣೆ ತಿಳಿಸಿದೆ.

# Armed Force Flag Day - 2019

Bengaluru, Nov 27th (Karnataka Information)

As in the past, this year Armed Forces Flag Day will be observed on December 06, 2019 (Friday) at Raj Bhavan, Bengaluru at 04.00 P.M.

Ex-servicemen in large number are requested to participate in the Flag Day function. Those of ex-servicemen, who are interested to attend the function, are required to collect the invitation card from Office of the Joint Director, Dept of Sainik Welfare & Resettlement, Bengaluru (Urban) District, Field Marshal KM Cariappa Bhavan, 58, Field Marshal KM Cariappa Road, Bengaluru – 560 025.

## ಕೀಟ ವಿಸ್ಮಯ – ಕೀಟ ಲೋಕದಚ್ಚರಿಯ ಸುತ್ತ ಒಂದು ಪಯಣ

ಬೆಂಗಳೂರು, ನವೆಂಬರ್ 27 (ಕರ್ನಾಟಕ ವಾರ್ತೆ)

ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯವು "ಕೀಟ ವಿಸ್ಮಯ" – ಕೀಟ ಲೋಕದಚ್ಚರಿಯ ಸುತ್ತ ಒಂದು ಪಯಣವನ್ನು ನವೆಂಬರ್ 29 ಮತ್ತು 30 ಮತ್ತು ಡಿಸೆಂಬರ್ 1 ರಂದು ಬೆಳಿಗ್ಗೆ 9.00 ಗಂಟೆಯಿಂದ ಸಾಯಂಕಾಲ 6 ಗಂಟೆಯವರೆಗೆ ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಆವರಣದಲ್ಲಿರುವ ಡಾ ಬಾಬು ರಾಜೇಂದ್ರ ಪ್ರಸದ್ ಅಂತರರಾಷ್ಟ್ರೀಯ ಸಭಾಂಗಣದಲ್ಲಿ ಏರ್ಪಡಿಸಿದೆ.

ಕೃಷಿಯಿಂದ ವಿಮುಕ್ತರಾಗುತ್ತಿರುವ ಯುವಕರನ್ನು ಕೃಷಿಯತ್ತ ಸೆಳೆಯಲು ಮತ್ತು ನಿಸರ್ಗದ ಬಗ್ಗೆ ಆಸಕ್ತಿ ಮತ್ತು ಅರಿವು ಮೂಡಿಸಲು ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ದೇಶದ ಏಕಮಾತ್ರ ಕೀಟ ಪ್ರದರ್ಶನವನ್ನು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ಕೀಟಶಾಸ್ತ್ರ ವಿಭಾಗವು ಹಮ್ಮಿಕೊಂಡು ಬಂದಿರುತ್ತದೆ.

ಈ ಪ್ರದರ್ಶನದಲ್ಲಿ 50 ಕ್ಕೂ ಮೇಲ್ಪಟ್ಟ ಕೀಟ ಛಾಯಾ ಚಿತ್ರಗಳು, ಪರೋಪಕಾರಿ ಮತ್ತು ಬಹು ಉಪಯೋಗಿ ಕೀಟಗಳು, ವೈವಿಧ್ಯತೆಯಿಂದ ಕೂಡಿದ ಸುಂದರ ಕೀಟಗಳು, ಪ್ರೇಕ್ಷಣೀಯ ಕೀಟಗಳು 5,000 ಕ್ಕೂ ಹೆಚ್ಚು ನೈಜ ಕೀಟಗಳ ನಿದರ್ಶನ, ಕೀಟಗಳ ಸಂಪರ್ಕ ವ್ಯವಸ್ಥೆ, ಅನುಪಕಾರಿ ಮತ್ತು ಕಪಟ ವೇಷಧಾರಿ ಕೀಟಗಳು, ಅಂಚೆ ಚೀಟಿಗಳಲ್ಲಿರುವ ಕೀಟಗಳು, ಕೀಟಗಳಿಂದ ಸಿದ್ದಪಡಿಸಿದ ಆಭರಣಗಳು, ಕೀಟಗಳ ಕಿರುಚಿತ್ರಗಳು ಮತ್ತು ಇನ್ನಿತರೆ ಕೀಟ ಪ್ರಪಂಚದ ವಿಸ್ಮಯಗಳು ಪ್ರದರ್ಶನದಲ್ಲಿರುತ್ತವೆ. ಸರ್ವರಿಗೂ ಪ್ರದರ್ಶನ ಉಚಿತವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಡಾ. ಕೆ. ಚಂದ್ರಶೇಖರ್, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕೀಟಶಾಸ್ತ್ರ ವಿಭಾಗ, ಮೊ. 9243065444 ಅವರನ್ನು ಸಂಪರ್ಕಿಸಬಹುದಾಗಿದೆ ಎಂದು ಕೃಷಿ ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

## ವಾಯುಮಾಲಿನ್ಯ ನಿಯಂತ್ರಣ ಮಾಸಾಚರಣೆ

**ಬೆಂಗಳೂರು, ನವೆಂಬರ್ 27 (ಕರ್ನಾಟಕ ವಾರ್ತೆ) :**

ಸಾರಿಗೆ ಇಲಾಖೆಯು ನವೆಂಬರ್ 2019 ಅನ್ನು ವಾಯು ಮಾಲಿನ್ಯ ನಿಯಂತ್ರಣ ಮಾಸಾಚರಣೆಯಾಗಿ ಆಚರಿಸಲಿದೆ. ಈ ಸಂಬಂಧ ನವೆಂಬರ್ 29 ರಂದು ಬೆಳಿಗ್ಗೆ 9-00 ಗಂಟೆಗೆ ವಾಕಥಾನ್ ಕಾರ್ಯಕ್ರಮ ಏರ್ಪಡಿಸಿದೆ.

## ಸ್ಮರಣಾಂಜಲಿ ಕಾರ್ಯಕ್ರಮ

**ಬೆಂಗಳೂರು, ನವೆಂಬರ್ 27 (ಕರ್ನಾಟಕ ವಾರ್ತೆ) :**

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ವತಿಯಿಂದ ಪದ್ಮಶ್ರೀ ಕದ್ರಿ ಗೋಪಾಲನಾಥ್ ಅವರ ಸ್ಮರಣಾಂಜಲಿ ಕಾರ್ಯಕ್ರಮವನ್ನು ಡಿಸೆಂಬರ್ 3 ರಂದು ಸಂಜೆ 5-00 ಗಂಟೆಗೆ ಬೆಂಗಳೂರಿನ ಕನ್ನಡ ಭವನ, ನಯನ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.